(ಇಂದು ದಿನಾಂಕಃ 04–02–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ಆರ ಎಂ ಆರ ವಕೀಲರಿಂದ -

27) ಸಾಕ್ಷಿಗೆ ಈಗ ನಿ.ಪಿ.5 ನ್ನು ತೋರಿಸಿ ಅದರ 2 ನೇ ಪುಟದ ದಿನಾಂಕದ ಕಂಡಿಕೆಯಲ್ಲಿ ಕ್ರಮ ಸಂಃ 1 ಮತ್ತು 2 ರಲ್ಲಿ 25.03.2012 ಹಾಗೂ 28.3.2012 ನಮೂದು ಇರುತ್ತದೆ ಅಂದರೆ ಸರಿ. ಅದೇ ರೀತಿ 2 ನೇ ಪುಟದ ದಿನಾಂಕದ ಕಂಡಿಕೆಯಲ್ಲಿ ಕ್ರಮ ಸಂಃ 3 ಮತ್ತು 4 ರಲ್ಲಿ 10.05.2012 ಹಾಗೂ 15.05.2012 ನಮೂದು ಇರುತ್ತದೆ ಅಂದರೆ ಸರಿ. ಅದೇ ರೀತಿ 2 ನೇ ಪುಟದ ದಿನಾಂಕದ ಕಂಡಿಕೆಯಲ್ಲಿ ಕ್ರಮ ಸಂಃ 5 ಮತ್ತು 6 ರಲ್ಲಿ 07.05.2012 ಹಾಗೂ 10.05.2012 ನಮೂದು ಇರುತ್ತದೆ ಅಂದರೆ ಸರಿ. ಅದೇ ರೀತಿ 2 ನೇ ಪುಟದ ರಸೀದಿ ಸಂಖ್ಯೆ ಕಂಡಿಕೆಯಲ್ಲಿ ರಿಸೀದಿ ಸಂಖ್ಯೆ ಬೇರೆ ಬೇರೆ ನಮೂದು ಇರುತ್ತದೆ ಅಂದರೆ ಸರಿ. ಸಾಮಾನ್ಯವಾಗಿ ಖರೀದಿ ವ್ಯವಹಾರ ಆದ ನಂತರದಲ್ಲಿ ಖರೀದಿ ಮಾಡಿದವರು ಮಾರಾಟ ಮಾಡಿದರಿಗೆ ವ್ಯವಹಾರದ ಸಂಬಂದ ಸರಕುಗಳ ಹಾಗೂ ಅದರ ಮೌಲ್ಯದ ಬಗ್ಗೆ ಮೂಲ ರಸೀದಿಯನ್ನು ನೀಡುತ್ತಾರೆ ಅಂದರೆ ಸರಿ. ವ್ಯವಹಾರದಲ್ಲಿ ಖರೀದಿ ಮಾಡಿದವರು ರಸೀದಿ ಪ್ರತಿಯನ್ನು ಇಟ್ಟುಕೊಂಡು ಮೂಲ ರಸೀದಿ ಮಾರಾಟ ಮಾಡಿದವರಿಗೆ ಕೊಡುತ್ತಾರೆ ಅಂದರೆ ಸರಿ.

28) ನಿ.ಪಿ.5 ರ 2 ನೇ ಪುಟದ ರಸೀದಿ ಕಂಡಿಕೆಯ ಕ್ರಮ ಸಂಃ 1 ರಲ್ಲಿ ಉಲ್ಲೇಖಿಸಿದ 122 ಗೆ ಸಂಬಂದಿಸಿದಂತೆ ಹತ್ತಿ ಮಾರಾಟ ಮಾಡಿರುತ್ತೇವೆ. ಸದರಿ 2 ನೇ ಪುಟದಲ್ಲಿ ಉಲ್ಲೇಖಿಸಿದ ಕ್ರಮ ಸಂಃ 1 ಮತ್ತು 2 ವ್ಯವಹಾರಗಳನ್ನು ನನ್ನ ದೂರಿನಲ್ಲಿ ನಮೂದು ಮಾಡಿದ ಬಗ್ಗೆ ಕೇಳಲಾಗಿ ಸಾಕ್ಷಿಯು ಆರೋಪಿತನು ಒಪ್ಪಿಗೆ ಪತ್ರ ನೀಡಿರುತ್ತಾನೆ ಅದರಲ್ಲಿ ಇರುತ್ತದೆ. ನಿ ಪಿ 5 ನ್ನು ನಾನು ಪ್ರಕರಣಕ್ಕೆ ಅನುಕೂಲವಾಗಲು ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿತನು ನನಗೆ 5,37,794 ರೂ. ಹಣವನ್ನು ನೀಡಬೇಕೆಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತನು ನನಗೆ ಯಾವದೇ ಒಪ್ಪಿಗೆ ಪತ್ರ ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ.

29) ನಾನು ನನ್ನ ಸಹೋದರ ಹಾಗೂ ನನ್ನ ತಂದೆಯವರು ಅವರ ಜೀವಿತ ಅವಧಿಯಲ್ಲಿ ಕೂಡಿಕೊಂಡು ಆರೋಪಿತನಿಗೆ ಬ್ಲಾಕ ಮೇಲ ಮಾಡುವ ಉದ್ದೇಶದಿಂದ ಸುಳ್ಳು ಸಂಗತಿಗಳನ್ನು ಮುಂದೆ ಮಾಡಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿತನು ಯಾವದೇ ಬಾದ್ಯತೆ ಹೊಂದಿರುವದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**